ಮಾನ್ಯ ಮಂತ್ರಿಗಳ ಪ್ರವಾಸಭತ್ಯ ದಿನಭತ್ಯ–ರಾಜ್ಯದಲ್ಲಿ ಮಂತ್ರಿ ರಾಜ್ಯದ ಹೊರಗೆ

೩೦೩. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ರಲ್ಲಿ ಸರ್ಕಾರದ ಎಲ್ಲಾ ಮಂತ್ರಿಗಳು (ಮುಖ್ಯಮಂತ್ರಿಗಳೂ ಸೇರಿ) ಪಡೆದಿರುವ ಸಂಬಳ, ಪ್ರವಾಸ ಭತ್ಯ ದಿನಭತ್ಯವೆಷ್ಟು ?

ಆ) ರಾಜ್ಯ ಹೊರಗಡೆ ಪ್ರವಾಸ ಮಾಡಿ ಪಡೆದಂತಹ ಭತ್ಯದ ಒಟ್ಟು ಹಣವೆಷ್ಟು ?

ಇ) ದೂರವಾಣಿ ಸ್ಥಳೀಯ ಕರೆಗಳ ಹಾಗೂ ದೂರವಾಣಿ ಕರೆಗಳ (ಟ್ರಂಕ್ ಕಾಲ್ಸ್) ಹಣವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಸಂಬಳ ರೂ. ೧೧,೭೭,೯೯೯–೧೮

ಪ್ರವಾಸ ಭತ್ಯ ದಿನಭತ್ಯ | ರೂ. ೩೦,೯೫.೧೧೨–೪೦

ಆ) ರೂ. ೪,೪೪,೫೦೧–೭೦

ಇ) ರೂ. ೪೩,೩೯,೪೭೭–೦೦

ಬೈಲಹೊಂಗಲ ಕೆ. ಎಸ್. ಆರ್. ಟಿ. ಸಿ. ಬಸ್ ಡಿಪೋದಲ್ಲಿ ವಾಹನ ಚಾಲಕರ ಕೊರತೆ

೧೦೬೮. ಶ್ರೀ ಎಸ್. ಜೆ. ಕೌಜಲಗಿ (ಬೈಲಹೊಂಗಲ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಇರುವ ಕೆ.ಎಸ್.ಆರ್.ಟಿ.ಸಿ. ಡಿಪೋದಲ್ಲಿ ವಾಹನ ಚಾಲಕರ ಕೊರತೆಯಿಂದ ಪ್ರತಿ ದಿವಸ ಓಡಾಡುವ ಶೆಡ್ಯೂಲ್ಡ್ ಬಸ್ಸುಗಳನ್ನು ಓಡಾಡಿಸುವುದನ್ನು ರದ್ದುಪಡಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಇದನ್ನು ನಿವಾರಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು.

ಇ) ಬಸ್ ಸ್ಟ್ಯಾಂಡ್‌ನಲ್ಲಿ ಎಳ್ಳಷ್ಟೂ ಸ್ವಚ್ಛತೆ ಇಲ್ಲದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಸ್ವಚ್ಛತೆ ಇಡಲಿಂ ಯಾವ ಕ್ರಮ ಕೈಗೊಂಡಿರುವರು.

ಈ) ಬೈಲಹೊಂಗಲ ಡಿಪೋದಲ್ಲಿ ಸ್ಟ್ಯಾಂಡ್ ಇನ್‌ಚಾರ್ಜ್, ಟ್ರಾಫಿಕ್ ಇನ್ಸ್‌ಪೆಕ್ಟರ್ ಮತ್ತು ಎ. ಟಿ. ಎಸ್. ಒಬ್ಬರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಆವರನ್ನು ಭರ್ತಿ ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಡ್ರೈವರ್‌ಗಳ ಕೊರತೆಯಿಂದಾಗಲೀ ಅಥವಾ ಯಾವುದೇ ಕಾರಣಕ್ಕಾಗಲೀ ಬೈಲಹೊಂಗಲ ಡಿಪೋನಿಂದ ಓಡಾಡುವ ಯಾವುದೇ ಟ್ರಿಪ್ಪುಗಳನ್ನು ರದ್ದುಪಡಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬಸ್ ನಿಲ್ದಾಣದ ಸ್ವಚ್ಛತೆಯನ್ನು (ಮೂತ್ರಿಗಳೂ ಸೇರಿದಂತೆ) ಸ್ವಚ್ಛತಾ ಕಂಟ್ರಾಕ್ಟರ್ ರೊಬ್ಬರಿಗೆ ತಾ. ೧-೧೦-೮೭ರಿಂದ ವಹಿಸಲಾಗಿದೆ ಮತ್ತು ಬಸ್ ನಿಲ್ದಾಣದ ಆವರಣವನ್ನು ಸ್ವಚ್ಛವಾಗಿಡಲಾಗಿದೆ.

ಈ) ಬಸ್ ನಿಲ್ದಾಣದ ಕಾರ್ಯಾಚರಣೆಯ ಹಾಗೂ ನಿಲ್ದಾಣದ ಸ್ವಚ್ಛತಾ ಮೇಲ್ವಿಚಾರಣೆಗಾಗಿ ಒಬ್ಬ ಟ್ರಾಫಿಕ್ ಇನ್ಸ್‌ಪೆಕ್ಟರ್ ಅವರನ್ನು ನೇಮಿಸಲಾಗಿದೆ.